

# ತರುಣ್‌ಗೆ 'ದವನ ಕುವರ', ಕೃತಿಕಾಗೆ 'ದವನ ಕುವರಿ' ಪ್ರಶಸ್ತಿ ಪ್ರದಾನ

ದಾವಣಗೆರೆ, ಮಾ. 26- ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ 'ನಮ್ಮ ದವನ' ಕಾರ್ಯಕ್ರಮದ ಅಂಗವಾಗಿ ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ಅತಿ ಹೆಚ್ಚು ಅಂಕ ಪಡೆದು ವಿಜೇತರಾದವರಿಗೆ ಆಕರ್ಷಕ ಟ್ರೋಫಿ ನೀಡಲಾಯಿತು.

ಈ ಬಾರಿ ಇನ್‌ಫಾರ್ಮೇಶನ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳು 950 ಅಂಕಗಳನ್ನು ಪಡೆಯುವ ಮೂಲಕ ವಿನ್ನರ್ ಆಗಿ ಹೊರಹೊಮ್ಮಿದ್ದಾರೆ.

ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳು 400 ಅಂಕಗಳನ್ನು ಪಡೆಯುವ ಮೂಲಕ ರನ್ನರ್ ಅಪ್ ಪ್ರಶಸ್ತಿಗೆ ಭಾಜನರಾದರು.

ಇನ್‌ಫಾರ್ಮೇಶನ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳಾದ ಹೆಚ್. ತರುಣ್ ಅವರು 175 ಅಂಕಗಳನ್ನು ಪಡೆಯುವ ಮೂಲಕ 'ದವನ ಕುವರ' ಹಾಗೂ ಎನ್. ಕೃತಿಕಾ ಅವರು 300 ಅಂಕಗಳೊಂದಿಗೆ 'ದವನ ಕುವರಿ' ಪ್ರಶಸ್ತಿಗೆ ಭಾಜನರಾದರು.

# ವಿದ್ಯಾರ್ಥಿ ಸಮುದಾಯದಲ್ಲಿ ಕುಸಿಯುತ್ತಿರುವ ಮೌಲ್ಯಗಳು



'ನಮ್ಮ ದವನ-23' ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕ, ಸಾಹಿತಿ ಡಾ. ಎಂ.ಇ. ಶಿವಕುಮಾರ್ ಆತಂಕ

ದಾವಣಗೆರೆ, ಮಾ. 25- ಪ್ರಸ್ತುತ ವಿದ್ಯಾರ್ಥಿ ಸಮುದಾಯದಲ್ಲಿ ಮೌಲ್ಯಗಳು ನಶಿಸಿ ಹೋಗುತ್ತಿವೆ ಎಂಬ ಆತಂಕ ಅಧ್ಯಾಪಕರು ಮತ್ತು ಪೋಷಕರನ್ನು ಕಾಡುತ್ತಿದೆ ಎಂದು ರಾಣೇಬೆನ್ನೂರು ತರಳಬಾಳು ಜಗದ್ಗುರು ತಾಂತ್ರಿಕ ಮಹಾವಿದ್ಯಾಲಯದ ಪ್ರಾಧ್ಯಾಪಕರೂ, ಸಾಹಿತಿಗಳಾದ ಡಾ. ಎಂ.ಇ. ಶಿವಕುಮಾರ್ ಹೊನ್ನಾಳಿ ಹೇಳಿದರು.

ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿ ನಿನ್ನೆ ಏರ್ಪಾಡಾಗಿದ್ದ 'ನಮ್ಮ ದವನ'-23 ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಬೆಳೆಯುವ ಪ್ರಯತ್ನ ಮಾಡಬೇಕು. ಮಾಡದಿದ್ದರೆ ಬದುಕು ಕೊಳೆತು ಹೋಗುವುದು ಖಚಿತ. ಹುಚ್ಚು ಹುಚ್ಚು ಕನಸುಗಳ ಬೆನ್ನತ್ತಿ ಹೋಗುವ ಬದಲು ಪ್ರಾಮಾಣಿಕ ಕನಸುಗಳನ್ನು ಕಾಣಬೇಕು. ನಿಮ್ಮ ಯಶಸ್ಸು ನಿಮ್ಮ ಕೈಯ್ಯಲ್ಲಿದೆ ಎಂದರು. ಹೇರಳವಾಗಿ ಪುಗಸಟ್ಟೆ ಸಿಗುವಂತದ್ದು ಉಪದೇಶ. ಉಪದೇಶ ಮಾಡಬೇಕಾದರೆ ನಾನು ಪಕ್ಕಾ ಪಕ್ಕಾ ಇದ್ದೇನೆಯೇ ಎಂದು ಮನಗಂಡು ಉಪದೇಶ ಮಾಡಬೇಕು. ವಿದ್ಯಾರ್ಥಿಗಳು ಹಿಂದಿನಂತೆ ಕಷ್ಟಪಡುವಂತಿಲ್ಲ. ಏನೇ ಮಾಹಿತಿ ಬೇಕಾದರೂ ನಿಮ್ಮ ಬೆರಳ ತುದಿಯಲ್ಲಿ ಸಿಗುತ್ತದೆ. (ಗೂಗಲ್) ಮನುಷ್ಯ ಹಕ್ಕಿಯಂತೆ ಹಾರುವುದನ್ನು ಕಲಿತ, ಮೀನಿನಂತೆ ಈಜುವುದನ್ನು ಕಲಿತ. ಆದರೆ ಭೂಮಿ ಮೇಲೆ ಮನುಷ್ಯನಾಗಿ ಬಾಳುವುದನ್ನು ಮಾತ್ರ ಕಲಿಯಲಿಲ್ಲ ಎಂದರು.

'ಹಣತೆ ಹಚ್ಚುತ್ತೇನ ನಾನು, ಕತ್ತಲೆಯನ್ನು ದಾಟುತ್ತೇನೆಂಬ ಭ್ರಮೆಯಿಂದಲ್ಲ. ಇರುವಷ್ಟು ಹೊತ್ತು ನಿನ್ನ ಮುಖ ನಾನು, ನನ್ನ ಮುಖ ನೀನು ನೋಡಬಹುದೆಂಬ ಒಂದೇ ಒಂದು ಆಸೆಯಿಂದ. ಹಣತೆ ಆರಿದ ಮೇಲೆ ನೀನು ಯಾರೋ, ನಾನು ಯಾರೋ' ಎಂಬ ಕವನದ ಮೂಲಕ ಮಾತು ಆರಂಭಿಸಿದ ಶಿವಕುಮಾರ್, ಕಾವ್ಯಕ್ಕೆ ತನ್ನದೇ ಆದ ತಾಕತ್ತು, ಉಸಿರು ಇದೆ ಎಂದು ಹೇಳಿದರು.

'ದವನ' ಕಾರ್ಯಕ್ರಮದ ಆರಂಭದಲ್ಲಿ ಅತಿಥಿಗಳೊಟ್ಟಿಗೆ ವಿದ್ಯಾರ್ಥಿ ಮುಖಂಡರಿಗೆ ವೇದಿಕೆ ಮೇಲೆ ಕೂರಿಸಿ ಹೂ ಗುಚ್ಛ ನೀಡಿ ಗೌರವಿಸುತ್ತಿರುವುದು ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಸಂಸ್ಕೃತಿ, ಸಂಸ್ಕಾರದ ಪ್ರತೀಕ. 'ದವನ' ಅಂದರೆ ಅದು ಒಂದು ಸೊಗಸಾದ ಪರಿಮಳ ಉಂಟು ಮಾಡುವ ಗಿಡ. ಇದನ್ನು ಭಾರತದಲ್ಲಿ ಹೇರಳವಾಗಿ ಬೆಳೆಯುತ್ತಾರೆ. ಎಲೆ ಮತ್ತು ಕಾಂಡವನ್ನು ಹಾರಗಳು ಮತ್ತು ಹೂ ಗುಚ್ಛ ಮಾಡಲು ಬಳಸುತ್ತಾರೆ. ಇಂತಹ ಪರಿಮಳ ಬೀರುವ, ಪರಿಣಾಮಕಾರಿ ಯಾದ 'ದವನ' ಎಂದು ಬಿಐಇಟಿಯವರು ಇಟ್ಟಿರುವುದು ಅರ್ಥಪೂರ್ಣ ಎಂದರು.

ಬಿಐಇಟಿ ಕಾಲೇಜಿನ ಪ್ರಾಚಾರ್ಯ ಡಾ. ಹೆಚ್.ಬಿ. ಅರವಿಂದ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಡೀನ್ ಡಾ. ಎಸ್.ಎನ್. ರಮೇಶ್, ಸೀನಿಯರ್ ಫ್ಯಾಕಲ್ಟಿ ಎಂ.ಸಿ. ಪಾಟೀಲ್, ಮೆಕ್ಯಾನಿಕಲ್ ವಿಭಾಗದ ಪ್ರಾಧ್ಯಾಪಕ ಡಾ.ಕೆ.ಸಿ. ದೇವೇಂದ್ರಪ್ಪ, ಸಹಾಯಕ ಪ್ರಾಧ್ಯಾಪಕರಾದ ಡಾ.ಹೆಚ್.ಪಿ. ವಿನುತ, ಡಾ. ಎಸ್.ಬಿ. ಮಲ್ಲಿಕಾರ್ಜುನ್, ಪ್ರೊ. ಭಾಗ್ಯ ಶಿವಕುಮಾರ್, ಪ್ರೊ. ಕೆ.ಬಿ.ಎಲ್. ವಸುದೇವ್ ನಾಯಕ, ಪ್ರೊ. ಕರಿಬಸವರಾಜು ಉಪಸ್ಥಿತರಿದ್ದರು.

ಇದೇ ವೇಳೆ ಕಾಲೇಜಿನ ವಿದ್ಯಾರ್ಥಿ ಸಂಘದ ವಿವಿಧ ವಿಭಾಗಗಳ ವಿದ್ಯಾರ್ಥಿ ಮುಖಂಡರಾದ ಎಂ.ಹೆಚ್. ಕರಿಬಸವರಾಜ್, ಟಿ.ಎನ್. ಅಪೇಕ್ಷಾ, ಟಿ.ವಿ. ಹರ್ಷಾ, ಸಂತೋಷ್ ಪವನ್, ಸ್ಯೆಯದ್ ಜಬೀವುಲ್ಲಾ, ವಿ.ಎಸ್. ವಿವೇಕ್, ವಿ.ಅಪೇಕ್ಷಾ, ಎಲ್. ದೀಪಕ್, ಸಿ. ಗಿರೀಶ್, ರಕ್ಷಿತ್ ಗೌಡ, ಸಹನಾ ಆಚಾರ್, ಬಿ.ಎಸ್. ಸಂಜನಾ, ವೇಣು ಜಡಿಯಪ್ಪನವರ್, ಚಂದುರಾಣಿ, ಆರ್. ನಯನ ರಾಘವೇಂದ್ರ, ಎನ್. ಶ್ರೀತೇಜ, ವಿಘ್ನೇಶ, ಹೆಚ್.ಟಿ. ಐಶ್ವರ್ಯ, ಎಸ್. ಮೋಹನ್, ಜಿ.ಎಸ್. ನಾಗದರ್ಶನ್, ನಿಖಿಲ್, ಕೆ.ಹೆಚ್. ರೋಹನ್, ಎಸ್.ಯು. ರುದ್ರೇಶ್, ಬಿ.ಎಲ್.ಪ್ರಮೋದ್ ಭಾಗವಹಿಸಿದ್ದರು. ಅನುಪಾ ನಿರೂಪಿಸಿದರು.

# ಸಂಗೀತ ಲೋಕದ ಸೃಷ್ಟಿಗೆ ಸಾಕ್ಷಿಯಾದ ಬಿಐಇಟಿ 'ನಮ್ಮ ದವನ' ಕಾರ್ಯಕ್ರಮ



ದಾವಣಗೆರೆ, ಮಾ. 26- ಸಂಜೆಯ ಇಳಿ ಹೊತ್ತಿನಲ್ಲಿ, ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕೃತಗೊಂಡಿದ್ದ ಬೃಹತ್ ವೇದಿಕೆಯಲ್ಲಿ ಖ್ಯಾತ ಗಾಯಕ ರಾಜೇಶ್ ಕೃಷ್ಣನ್ ಮತ್ತವರ ಸಂಗಡಿಗರ ಗಾಯನ ಸಂಗೀತ ಪ್ರಿಯರನ್ನು ಮಂತ್ರಮುಗ್ಧರನ್ನಾಗಿಸಿತು.

ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ ರಾಜೇಶ್ ಕೃಷ್ಣನ್ ರಸಮಂಜರಿ ಕಾರ್ಯಕ್ರಮದ ಅಭೂತಪೂರ್ವ ಯಶಸ್ಸಿಗೆ ಸಾಕ್ಷಿಯಾಗಿತ್ತು.

ರಾಜೇಶ್ ಕೃಷ್ಣನ್, ಸರಿಗಮಪ ಖ್ಯಾತಿಯ ವಸುಶ್ರೀ ಹಳೇಮನಿ, ಸುಪ್ರೀತ್ ಫಲ್ಗುಣ, ಸುಬ್ರಹ್ಮಣ್ಯ ಅವರುಗಳ ಸುಮಧುರ ಕಂಠದಿಂದ ಹೊರಹೊಮ್ಮಿದ ಹಾಡುಗಳು ಸಂಗೀತ ಪ್ರಿಯರಿಗೆ ಮುದ ನೀಡಿದವು.

ರಾಜೇಶ್ ಕೃಷ್ಣನ್ ತಮ್ಮದೇ ಹಿಟ್ ಹಾಡುಗಳ ಮೂಲಕ ಸಹೃದಯರನ್ನು ಸಂಗೀತ ಲೋಕದಲ್ಲಿ ತೇಲುವಂತೆ ಮಾಡಿದರು. 'ಕಣ್ಣಿನಲ್ಲಿ ಕಣ್ಣನಿಟ್ಟು ಮನಸ್ಸಿನಲ್ಲಿ ಮನಸನಿಟ್ಟು, ಉಸಿರೇ ಉಸಿರೇ, ಉಸಿರೇ, ಗೀತಾಂಜಲಿ.. ಹಾಲುಗೆನ್ನಗೆ, ಬಾಳೆದಿಂಡಿಗೆ ನಮ್ಮೂರ ಹೆಣ್ಣಿಗೆ, ಜೊತೆಯಲಿ ಜೊತೆ ಜೊತೆಯಲಿ....., ನಗುವ ನಯನ, ಮಧುರ ಮೌನ ಮುಂತಾದ ಹಾಡುಗಳಿಗೆ ನೆರೆದಿದ್ದ ಕಾಲೇಜಿನ ವಿದ್ಯಾರ್ಥಿ - ವಿದ್ಯಾರ್ಥಿನಿಯರು, ಪೋಷಕರು, ಸಂಗೀತ ಪ್ರಿಯರೆಲ್ಲರೂ ಮೊಬೈಲ್ ಟಾರ್ಚ್ ಲೈಟ್ ಬಿಡುವುದಲ್ಲದೇ ನಿಂತಲ್ಲೇ ಹೆಜ್ಜೆ ಹಾಕುವ ಮೂಲಕ ಗಾಯಕರನ್ನು ಹುರಿದುಂಬಿಸಿದರು.

ಒಟ್ಟಾರೆ ಬಿಐಇಟಿ ಮೈದಾನ ಹೊಸ ಸಂಗೀತ ಲೋಕವನ್ನೇ ಸೃಷ್ಟಿ ಮಾಡುವುದಕ್ಕೆ ಸಾಕ್ಷಿಯಾಗಿತ್ತು.

ವಾದ್ಯ ಕಲಾವಿದರ ಸಂಗೀತ ಕೈಚಳಕ, ಗಾಯಕರ ಆಕರ್ಷಕ ಗಾಯನ, ಸರಿತಾ ಶೆಟ್ಟಿ ಅವರ ಅಚ್ಚುಕಟ್ಟಾದ ನಿರೂಪಣಾ ಶೈಲಿ ಎಲ್ಲರ ಗಮನ ಸೆಳೆಯಿತು.

# ಅಭಿವೃದ್ಧಿಗೆ ಪ್ರತಿಯೊಬ್ಬರೂ ಕೈಜೋಡಿಸಬೇಕು



ದಾವಣಗೆರೆ, ಮಾ. 26- ಜಿಲ್ಲೆಯನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಲು ಪ್ರತಿಯೊಬ್ಬ ನಾಗರಿಕರು ಸಹಕರಿಸುವಂತೆ ಮಾಜಿ ಸಚಿವರೂ, ಬಾಪೂಜಿ ವಿದ್ಯಾಸಂಸ್ಥೆ ಗೌರವ ಜಂಟಿ ಕಾರ್ಯದರ್ಶಿಯೂ ಆದ ಶಾಮನೂರು ಮಲ್ಲಿಕಾರ್ಜುನ್ ಮನವಿ ಮಾಡಿದರು.

ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿ ಕಾಲೇಜಿನ ವತಿಯಿಂದ ಇಂದು ಸಂಜೆ ಆಯೋಜಿಸಿದ್ದ 'ನಮ್ಮ ದವನ-23' ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಬಿಐಇಟಿ ಕಾಲೇಜಿನಲ್ಲಿ 1985 ರಿಂದ 'ನಮ್ಮ ದವನ' ಕಾರ್ಯಕ್ರಮ ಆರಂಭವಾಯಿತು. ಮೊದಲು ಆರಂಭಿಸಿದವರು ಮೈಸೂರಿನ ಜೆಎಸ್ಎಸ್ ಮಹಾವಿದ್ಯಾಲಯದವರು. ಆರಂಭದ ವರ್ಷಗಳಲ್ಲಿ ವಿವಿಧ ಕಾಲೇಜುಗಳಿಗೆ ಆಹ್ವಾನ ನೀಡಿ ಕಾರ್ಯಕ್ರಮ ಆಯೋಜಿಸಲಾಗುತ್ತಿತ್ತು. ಆಗ ಕಾಲೇಜುಗಳು ಮತ್ತು ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇತ್ತು. ಆದರೆ ಈಗ ಬಿಐಇಟಿ ಕಾಲೇಜು ಸುಮಾರು ಐದು ಸಾವಿರ ವಿದ್ಯಾರ್ಥಿಗಳನ್ನು ಹೊಂದಿದ್ದು, ದವನ ಕಾರ್ಯಕ್ರಮವನ್ನು ಪ್ರತಿ ವರ್ಷ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವುದಕ್ಕೆ ಅವರು ಹರ್ಷ ವ್ಯಕ್ತಪಡಿಸಿದರು.

ತಮ್ಮ ಅವಧಿಯಲ್ಲಿ ನಿರ್ಮಾಣಗೊಂಡ 'ದಾವಣಗೆರೆ ಗಾಜಿನ ಮನೆ' ಯಲ್ಲಿಯೇ ಸಾರ್ವಜನಿಕರಿಗಾಗಿ ಪ್ರತಿ ಭಾನುವಾರ ಸಂಗೀತ ಕಾರ್ಯಕ್ರಮಗಳನ್ನು ಮಾಡಿದರೆ ಅತ್ಯುತ್ತಮವಾಗಿ ಮೂಡಿಬರಲು ಸಾಧ್ಯವಾಗುತ್ತಿತ್ತು. ಅಲ್ಲಿ ಸಂಗೀತ ಪ್ರಿಯರಿಗೆ ಸಂಗೀತ ಆಲಿಸಲು, ಗಾರ್ಡನ್ ಜೊತೆಗೆ ಉತ್ತಮ ವಾತಾವರಣ ಕೂಡ ಇದೆ ಎಂದು ಹೇಳಿದರು.

> ನಗರದ ಸೌಂದರ್ಯವನ್ನು ಹೆಚ್ಚಿಸಲು ಇಟಲಿ, ಸ್ಪೇನ್ ಮುಂತಾದ ದೇಶಗಳಿಂದ ಅಲಂಕಾರಿಕ ಗಿಡಗಳನ್ನೂ ಸಹ ಆಮದು ಮಾಡಿಕೊಳ್ಳಲಾಗಿತ್ತು. ಆದರೆ, ಇತ್ತೀಚಿನ ದಿನಗಳಲ್ಲಿ ಅಧಿಕಾರಕ್ಕೆ ಬಂದವರು ನಗರದ ಸೌಂದರ್ಯೀಕರಣದ ಕಡೆಯಾಗಲೀ, ಗಾಜಿನ ಮನೆಯ ಸದುಪಯೋಗದ ಬಗ್ಗೆ ಗಮನಹರಿಸುತ್ತಿಲ್ಲ.
>
> \- ಶಾಮನೂರು ಮಲ್ಲಿಕಾರ್ಜುನ್, ಮಾಜಿ ಸಚಿವರು

ಜಿಲ್ಲೆ, ರಾಜ್ಯ, ದೇಶದ ಜನ ಒಳ್ಳೆಯ ರೀತಿಯಲ್ಲಿ ಒಂದಾಗಬೇಕು. ಜನತೆ ತಮಗೆ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ಆಶೀರ್ವದಿಸಬೇಕು ಎಂದು ಎಸ್ಸೆಸ್ಸೆಂ ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ಶಾಮನೂರು ಮಲ್ಲಿಕಾರ್ಜುನ್ ಹಾಗೂ ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯರಾದ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್ ದಂಪತಿಯನ್ನು ಕಾಲೇಜಿನ ವತಿಯಿಂದ ಗೌರವಿಸಲಾಯಿತು.

ಕಾಲೇಜಿನ ಪ್ರಾಂಶುಪಾಲ ಡಾ.ಹೆಚ್.ಬಿ. ಅರವಿಂದ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಬಾಪೂಜಿ ವಿದ್ಯಾಸಂಸ್ಥೆಯ ಶೈಕ್ಷಣಿಕ ನಿರ್ದೇಶಕ ಡಾ. ಎಂ.ಜಿ. ಈಶ್ವರಪ್ಪ, ವಿಭಾಗಗಳ ಮುಖ್ಯಸ್ಥರಾದ ಡಾ. ಎಸ್.ಎನ್. ರಮೇಶ್, ಡಾ.ಜಿ.ಪಿ. ದೇಸಾಯಿ, ಡಾ. ಕೆ.ಸಿ. ದೇವೇಂದ್ರಪ್ಪ, ಡಾ.ಎಸ್.ಬಿ. ಮಲ್ಲಿಕಾರ್ಜುನ್, ಎಂ.ಸಿ. ಪಟೇಲ್, ಡಾ.ಎಚ್.ಪಿ. ವಿನುತ, ಶ್ರೀಮತಿ ಭಾಗ್ಯ ಶಾಂತಕುಮಾರ್, ವಾಸುದೇವ ನಾಯಕ್, ಟಿ.ಎಸ್. ಕರಿಬಸವರಾಜು, ಗಾಯಕ ರಾಜೇಶ್ ಕೃಷ್ಣನ್ ಉಪಸ್ಥಿತರಿದ್ದರು.





ದಾವಣಗೆರೆಯ ಬಾಪೂಜಿ ತಾಂತ್ರಿಕ ಮತ್ತು ಎಂಜಿನಿಯರಿಂಗ್ ಕಾಲೇಜಿನಿಂದ ಶುಕ್ರವಾರ 'ನಮ್ಮ ದವನ 2023' ಕಾರ್ಯಕ್ರಮ ನಡೆಯಿತು. ರಾಣೆಬೆನ್ನೂರಿನ ಪ್ರಾಧ್ಯಾಪಕ ಡಾ.ಎಂ.ಇ. ಶಿವಶಂಕರ್ ಹೊನ್ನಾಳಿ, ಬಿಐಇಟಿ ಕಾಲೇಜಿನ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ, ಪ್ರಾಚಾರ್ಯ ಡಾ.ಎಚ್.ಬಿ. ಅರವಿಂದ್, ಬಯೋಟೆಕ್ ಮುಖ್ಯಸ್ಥ ಜೆ.ಪಿ. ದೇಸಾಯಿ, ಎಂ.ಸಿ. ಪಾಟೀಲ್, ಡಾ.ಕೆ.ಸಿ. ದೇವೇಂದ್ರಪ್ಪ, ಡಾ.ಎಚ್.ಪಿ. ವಿನುತ ಇದ್ದರು (ಎಡಚಿತ್ರ). 'ನಮ್ಮ ದವನ 2023' ಕಾರ್ಯಕ್ರಮದಲ್ಲಿ 'ಮಿಸ್ ಬಿಐಇಟಿ' ಆಗಿ ವಿದ್ಯಾರ್ಥಿನಿ ಲಕ್ಷ್ಮೀ ಆಯ್ಕೆಯಾದರು. ಲಕ್ಷ್ಮೀ ಅವರು ಮಹದೇವಪ್ಪ ದಿದ್ದಿಗೆ ಹಾಗೂ ವಾಣಿ ದಂಪತಿ ಪುತ್ರಿ.

# ದಾವಣಗೆರೆಯ ದವನ - ನಮ್ಮ ದವನ-23




**ದಾ**ವಣಗೆರೆಯ ಪ್ರತಿಷ್ಠಿತ ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿಯಲ್ಲಿ ನಡೆಯುವ ಸಾಂಸ್ಕೃತಿಕ ಉತ್ಸವದ ಹೆಸರೇ ನಮ್ಮ ದವನ .

ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ 1985ರಲ್ಲಿ ಮೈದಾಳಿದ ಇಂತಹ ಉತ್ಸವವು




ವಿಜ್ಞಾನ ಮತ್ತು ತಂತ್ರಜ್ಞಾನದ ದಿನನಿತ್ಯದ ಶೈಕ್ಷಣಿಕ ಪಠ್ಯಕ್ರಮದಿಂದ ಅಗತ್ಯವಿರುವ ವಿರಾಮಗಳನ್ನು ಒದಗಿಸುತ್ತ ,

ವಿದ್ಯಾರ್ಥಿಗಳು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢರಾಗಲು ಸಹಾಯ ಮಾಡುತ್ತದೆ. ಎಲ್ಲಾ ವಿಭಾಗಗಳ ವಿದ್ಯಾರ್ಥಿಗಳಿಗೆ ತಮ್ಮ ಪ್ರತಿಭೆ ಮತ್ತು ಸೃಜನಶೀಲತೆಯನ್ನು ಪ್ರದರ್ಶಿಸಲು ಇದು ಅದ್ಭುತ ವೇದಿಕೆಯಾಗಿದೆ. ಪ್ರತಿ ವರ್ಷ ಮೂರು ದಿನಗಳ ಕಾಲ ನಡೆಯುವ ಈ ಉತ್ಸವವು ಸಂಗೀತ, ನೃತ್ಯ, ನಾಟಕ, ಸಾಹಿತ್ಯ , ಕಲೆ ಹೀಗೆ ವಿಭಿನ್ನ ಪ್ರಕಾರಗಳನ್ನು ಒಳಗೊಂಡಿರುವ ವ್ಯಾಪಕ ಶ್ರೇಣಿಯ ಕಾರ್ಯಕ್ರಮಗಳೊಂದಿಗೆ ಭಾರತದ ಶ್ರೀಮಂತ ಸಾಂಸ್ಕೃತಿಕ ವೈವಿಧ್ಯತೆಯ ಉತ್ಸಾಹಭರಿತ ಮತ್ತು ವರ್ಣರಂಜಿತ ಆಚರಣೆಯಾಗಿದೆ.

ದವನವು ಶೈಕ್ಷಣಿಕ ಕ್ಯಾಲೆಂಡರ್‌ನಲ್ಲಿ ಬಹು ನಿರೀಕ್ಷಿತ ಕಾರ್ಯಕ್ರಮವಾಗಿದೆ ಮತ್ತು ಕರ್ನಾಟಕದ ವಿವಿಧ ಇಂಜಿನಿಯರಿಂಗ್ ಕಾಲೇಜ್ ವಿದ್ಯಾರ್ಥಿಗಳು ಈ ರಾಜ್ಯಮಟ್ಟದ ವೇದಿಕೆಯಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸುವ ಅವಕಾಶ ಪಡೆದುಕೊಳ್ಳುತ್ತಿದ್ದಾರೆ ಹಾಗೆ ಪ್ರತಿವರ್ಷ ಇದರಲ್ಲಿ ಭಾಗವಹಿಸಲು ಉತ್ಸುಕತೆಯಿಂದ ಎದುರು ನೋಡುತ್ತಾರೆ. ವಿದ್ಯಾರ್ಥಿಗಳ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡಲು ಮತ್ತು ರಚನಾತ್ಮಕ ಪ್ರತಿಕ್ರಿಯೆ ನೀಡಲು ವಿವಿಧ ಕ್ಷೇತ್ರಗಳ ತೀರ್ಪುಗಾರರನ್ನು ಆಹ್ವಾನಿಸಲಾಗುತ್ತದೆ. ಫೆಸ್ಟ್ ಗ್ರ್ಯಾಂಡ್ ಫಿನಾಲೆಯಲ್ಲಿ ಕೊನೆಗೊಳ್ಳುತ್ತದೆ, ಇದರಲ್ಲಿ ವಿಜೇತರು ಮತ್ತು ರನ್ನರ್ ಅಪ್‌ಗಳಿಗೆ ಮುಖ್ಯ ಅತಿಥಿಗಳಿಂದ ಬಹುಮಾನಗಳನ್ನು ನೀಡಲಾಗುತ್ತದೆ. ದವನವು ಕೇವಲ ಸಾಂಸ್ಕೃತಿಕ ಉತ್ಸವವಲ್ಲ, ಆದರೆ ಕಲೆ, ಸಂಸ್ಕೃತಿ ಮತ್ತು ವೈವಿಧ್ಯತೆಯ ಆಚರಣೆಯಾಗಿದೆ. ಇಂದು, ನಾಳೆ ಮತ್ತು 26ರಂದು ಇರಲಿದೆ. ನಮ್ಮ ದವನ-23 ಸೇರಿಕೊಳ್ಳಿ ಮತ್ತು ಆ ಅವಿಸ್ಮರಣೀಯ ಅನುಭವದ ಭಾಗವಾಗಿರಿ. ಅದು ನಿಮಗೆ ಶಾಶ್ವತವಾದ ನೆನಪುಗಳನ್ನು ಕೊಡುವುದು ಖಚಿತ.

ದ. ರಾ. ಬೇಂದ್ರೆ ಹೇಳಿದಂತೆ ಬದುಕು ಸವಿಸೋದಲ್ಲ, ಸವಿಯೋದು. ಅಂದ್ರೆ ಇದೇ ಅನುತ್ತೆ.



**-ಡಾ. ಎಂ. ಈ. ಶಿವಕುಮಾರ ಹೊನ್ನಾಳಿ**
**ಪ್ರಾಧ್ಯಾಕರು, ರಾಣೆಬೆನ್ನೂರು**

ಹೊಸನಾವಿಕ, ಶಿವಮೊಗ್ಗ



# ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿಯಲ್ಲಿ ಮಾ.24ರಿಂದ 3 ದಿನಗಳ ಕಾಲ ನಮ್ಮ ದವನ ವಿಶೇಷ ಸಾಂಸ್ಕೃತಿಕ ವೈಭವ




ದಾವಣಗೆರೆ: ಪ್ರತಿಷ್ಠಿತ ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿಯಲ್ಲಿ ನಡೆಯುವ ಸಾಂಸ್ಕೃತಿಕ ಉತ್ಸವದ ಹೆಸರೇ ನಮ್ಮ ದವನ. ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ 1985ರಲ್ಲಿ ಮೈದಾಳಿದ ಇಂತಹ ಉತ್ಸವವು ವಿಜ್ಞಾನ ಮತ್ತು ತಂತ್ರಜ್ಞಾನದ ದಿನನಿತ್ಯದ ಶೈಕ್ಷಣಿಕ ಪಠ್ಯಕ್ರಮದಿಂದ ಅಗತ್ಯವಿರುವ ವಿರಾಮಗಳನ್ನು ಒದಗಿಸುತ್ತ , ವಿದ್ಯಾರ್ಥಿಗಳು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದಢರಾಗಲು ಸಹಾಯ ಮಾಡುತ್ತದೆ. ಎಲ್ಲಾ ವಿಭಾಗಗಳ ವಿದ್ಯಾರ್ಥಿಗಳಿಗೆ ತಮ್ಮ ಪ್ರತಿಭೆ ಮತ್ತು ಸಜನಶೀಲತೆಯನ್ನು ಪ್ರದರ್ಶಿಸಲು ಇದು ಅದ್ಭುತ ವೇದಿಕೆಯಾಗಿದೆ.

ಪ್ರತಿ ವರ್ಷ ಮೂರು ದಿನಗಳ ಕಾಲ ನಡೆಯುವ ಈ ಉತ್ಸವವು ಸಂಗೀತ, ನೃತ್ಯ, ನಾಟಕ, ಸಾಹಿತ್ಯ, ಕಲೆ ಹೀಗೆ ವಿಭಿನ್ನ ಪ್ರಕಾರಗಳನ್ನು ಒಳಗೊಂಡಿರುವ ವ್ಯಾಪಕ ಶ್ರೇಣಿಯ ಕಾರ್ಯಕ್ರಮಗಳೊಂದಿಗೆ ಭಾರತದ ಶ್ರೀಮಂತ ಸಾಂಸ್ಕೃತಿಕ ವೈವಿಧ್ಯತೆಯ ಉತ್ಸಾಹ ಭರಿತ ಮತ್ತು ವರ್ಣರಂಜಿತ ಆಚರಣೆಯಾಗಿದೆ.

ದವನವು ಶೈಕ್ಷಣಿಕ ಕ್ಯಾಲೆಂಡರ್ ನಲ್ಲಿ ಬಹು ನಿರೀಕ್ಷಿತ ಕಾರ್ಯಕ್ರಮ ವಾಗಿದೆ ಮತ್ತು ಕರ್ನಾಟಕದ ವಿವಿಧ ಇಂಜಿನಿಯರಿಂಗ್ ಕಾಲೇಜ್ ವಿದ್ಯಾರ್ಥಿಗಳು ಈ ರಾಜ್ಯಮಟ್ಟದ ವೇದಿಕೆಯಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸುವ ಅವಕಾಶ ಪಡೆದುಕೊಳ್ಳುತ್ತಿದ್ದಾರೆ. ಹಾಗೆ ಪ್ರತಿವರ್ಷ ಇದರಲ್ಲಿ ಭಾಗವಹಿಸಲು ಉತ್ಸುಕತೆಯಿಂದ ಎದುರು ನೋಡುತ್ತಾರೆ.

ವಿದ್ಯಾರ್ಥಿಗಳ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡಲು ಮತ್ತು ರಚನಾತ್ಮಕ ಪ್ರತಿಕ್ರಿಯೆ ನೀಡಲು ವಿವಿಧ ಕ್ಷೇತ್ರಗಳ ತೀರ್ಪುಗಾರರನ್ನು ಆಹ್ವಾನಿಸ ಲಾಗುತ್ತದೆ.

ಫೆಸ್ಟ್ ಗ್ರ್ಯಾಂಡ್ ಫಿನಾಲೆಯಲ್ಲಿ ಕೊನೆಗೊಳ್ಳುತ್ತದೆ, ಇದರಲ್ಲಿ ವಿಜೇತರು ಮತ್ತು ರನ್ನರ್ ಅಪ್‌ಗಳಿಗೆ ಮುಖ್ಯ ಅತಿಥಿಗಳಿಂದ ಬಹುಮಾನಗಳನ್ನು ನೀಡಲಾಗುತ್ತದೆ.

ಪ್ರಿಯ ಓದುಗರೇ , ದವನವು ಕೇವಲ ಸಾಂಸ್ಕೃತಿಕ ಉತ್ಸವವಲ್ಲ. ಆದರೆ ಕಲೆ, ಸಂಸ್ಕೃತಿ ಮತ್ತು ವೈವಿಧ್ಯತೆಯ ಆಚರಣೆಯಾಗಿದೆ. ಇದೇ ಮಾ. 24 , 25 ಮತ್ತು 26 ರಂದು ಬನ್ನಿ , ನಮ್ಮ ದವನ 23 ಸೇರಿಕೊಳ್ಳಿ ಮತ್ತು ಆ ಅವಿಸ್ಮರಣೀಯ ಅನುಭವದ ಭಾಗವಾಗಿರಿ. ಅದು ನಿಮಗೆ ಶಾಶ್ವತವಾದ ನೆನಪುಗಳನ್ನು ಕೊಡುವುದು ಖಚಿತ. ನೋ ಡೌಟ್ ಓದುಗರೇ.

ದ. ರಾ. ಬೇಂದ್ರೆ ಹೇಳಿದಂತೆ ಬದುಕು ಸವಿಸೋದಲ್ಲ, ಸವಿಯೋದು. ಅಂದ್ರೆ ಇದೇ ಅನುತ್ತೆ ಅಲ್ಲವೇ...



ಡಾ. ಎಂ. ಈ. ಶಿವಕುಮಾರ ಹೊನ್ನಾಳಿ
ಪ್ರಧ್ಯಾಪಕರು , ರಾಣೇಬೆನ್ನೂರು.

# ದಾವಣಗೆರೆಯ ದವನ – ನಮ್ಮ ದವನ–23




ದಾವಣಗೆರೆಯ ಪ್ರತಿಷ್ಠಿತ ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ (BIET) ಯಲ್ಲಿ ನಡೆಯುವ ಸಾಂಸ್ಕೃತಿಕ ಉತ್ಸವದ ಹೆಸರೇ " ನಮ್ಮ ದವನ ". ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ 1985ರಲ್ಲಿ ಮೈದಾಳಿದ ಉತ್ಸವವು ವಿಜ್ಞಾನ ಮತ್ತು ತಂತ್ರಜ್ಞಾನದ ದಿನನಿತ್ಯದ ಶೈಕ್ಷಣಿಕ ಪಠ್ಯಕ್ರಮದಿಂದ ಅಗತ್ಯವಿರುವ ವಿರಾಮಗಳನ್ನು ಒದಗಿಸುತ್ತ . ವಿದ್ಯಾರ್ಥಿಗಳು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢರಾಗಲು ಸಹಾಯ ಮಾಡುತ್ತದೆ. ಎಲ್ಲಾ ವಿಭಾಗಗಳ ವಿದ್ಯಾರ್ಥಿಗಳಿಗೆ ತಮ್ಮ ಪ್ರತಿಭೆ ಮತ್ತು ಸೃಜನಶೀಲತೆಯನ್ನು ಪ್ರದರ್ಶಿಸಲು ಇದು ಅದ್ಭುತ ವೇದಿಕೆಯಾಗಿದೆ. ಪ್ರತಿ ವರ್ಷ ಮೂರು ದಿನಗಳ ಕಾಲ ನಡೆಯುವ ಈ ಉತ್ಸವವು ಸಂಗೀತ, ನೃತ್ಯ, ನಾಟಕ, ಸಾಹಿತ್ಯ . ಕಲೆ ಹೀಗೆ ವಿಭಿನ್ನ ಪ್ರಕಾರಗಳನ್ನು ಒಳಗೊಂಡಿರುವ ವ್ಯಾಪಕ ಶ್ರೇಣಿಯ ಕಾರ್ಯಕ್ರಮಗಳೊಂದಿಗೆ ಭಾರತದ ಶ್ರೀಮಂತ ಸಾಂಸ್ಕೃತಿಕ ವೈವಿಧ್ಯತೆಯ ಉತ್ಸಾಹಭರಿತ ಮತ್ತು ವರ್ಣರಂಜಿತ ಆಚರಣೆಯಾಗಿದೆ.

ದವನವು ಶೈಕ್ಷಣಿಕ ಕ್ಯಾಲೆಂಡರ್‌ನಲ್ಲಿ ಬಹು ನಿರೀಕ್ಷಿತ ಕಾರ್ಯಕ್ರಮವಾಗಿದೆ ಮತ್ತು ಕರ್ನಾಟಕದ ವಿವಿಧ ಇಂಜಿನಿ ಯ–ರಿಂಗ್ ಕಾಲೇಜ್ ವಿದ್ಯಾರ್ಥಿಗಳು ಈ ರಾಜ್ಯಮಟ್ಟದ ವೇದಿಕೆಯಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸುವ ಅವಕಾಶ ಪಡೆದುಕೊಳ್ಳುತ್ತಿದ್ದಾರೆ ಹಾಗೆ ಪ್ರತಿವರ್ಷ ಇದರಲ್ಲಿ ಭಾಗವಹಿಸಲು ಉತ್ಸುಕತೆಯಿಂದ ಎದುರು ನೋಡುತ್ತಾರೆ. ವಿದ್ಯಾರ್ಥಿಗಳ [illegible] ಮೌಲ್ಯಮಾಪನ ಮಾಡಲು ಮತ್ತು ರಚನಾತ್ಮಕ ಪ್ರತಿಕ್ರಿಯೆ ನೀಡಲು ವಿವಿಧ ಕ್ಷೇತ್ರಗಳ [illegible] ಆಹ್ವಾನಿಸಲಾಗುತ್ತದೆ.ಫೆಸ್ಟ್ ಗ್ರ್ಯಾಂಡ್ ಫಿನಾಲೆಯಲ್ಲಿ ಕೊನೆಗೊಳ್ಳುತ್ತದೆ. ಇದರಲ್ಲಿ ವಿಜೇತರು ಮತ್ತು ರನ್ನರ್ ಅಪ್‌ಗಳಿಗೆ ಮುಖ್ಯ ಅತಿಥಿಗಳಿಂದ ಬಹುಮಾನಗಳನ್ನು ನೀಡಲಾಗುತ್ತದೆ.

ದವನವು ಕೇವಲ ಸಾಂಸ್ಕೃತಿಕ ಉತ್ಸವವಲ್ಲ. ಆದರೆ ಕಲೆ, ಸಂಸ್ಕೃತಿ ಮತ್ತು ವೈವಿಧ್ಯತೆಯ ಆಚರಣೆಯಾಗಿದೆ. ಇದೇ ಮಾರ್ಚ್ 24 . 25 . 26 ರಂದು " ನಮ್ಮ ದವನ–23 " ಕಾರ್ಯಕ್ರಮದಲ್ಲಿ ಪಾಲ್ಗೊಂಡು ಈ ಅವಿಸ್ಮರಣೀಯ ಅನುಭವದ ಭಾಗವಾಗಿರಿ. ಅದು ನಿಮಗೆ ಶಾಶ್ವತವಾದ ನೆನಪುಗಳನ್ನು ಕೊಡುವುದು ಖಚಿತ.

**ದ. ರಾ. ಬೇಂದ್ರೆ ಹೇಳಿದಂತೆ**
**ಬದುಕು ಸವಿಸೋದಲ್ಲ ,**
**ಸವಿಯೋದು. ಅಂದ್ರೆ ಇದೇ ಅನ್ಸುತ್ತೆ.**



**– ಡಾ. ಎಂ. ಈ. ಶಿವಕುಮಾರ ಹೊನ್ನಾಳಿ**
**ಪ್ರಾಧ್ಯಾಪಕರು**
**ರಾಣೇಬೆನ್ನೂರು.**

## ಶ್ರೀ ಸಿದ್ಧೇಶ್ವರ ರಥೋತ್ಸವಕ್ಕೆ

## ಜೀವ ಜಲದ ಸಂರಕ್ಷಣೆಯತ್ತ ಜನರ ಕಾಳಜಿ